ಆಫ್ ಮಾಡುತ್ತಿದ್ದಂತೆ ಬೆಳಗ್ಗೆ ಕೂಪನ್ ತೆಗೆದುಕೊಂಡು ಹಾಲು – ಮೊಸರಿನ ಪಾಕೆಟ್ ಕೊಡುವ ರೇವಪ್ಪ, 'ನಿಮ್ಮ ಮಗಂಗೆ ಯಾರಾದ್ರೂ ಹುಡುಗಿ ಇದ್ರೆ ಹೇಳಿ ಅಂದಿದ್ರಲ್ಲ, ನಮ್ಮೂರ್ ಕಡೆ ಒಬ್ಳು ಹುಡುಗಿ ಇದಾಳೆ... ನಿಮ್ಮೋರೇ, ಒಳಪಂಗಡ ಗೊತ್ತಿಲ್ಲ... ಆದ್ರೆ ಎಸ್ಸೆಸ್ಸೆಲ್ಸಿ ಅಷ್ಟೇಯ. ಉಳಿದ್ದೆಲ್ಲ ಏ ಒನ್' ಎಂದದ್ದಕ್ಕೆ, 'ಅದಕ್ಕೇನು, ಹುಡುಗ–ಹುಡುಗಿ ಒಪ್ಪಿದರಾಯ್ತು' ಎಂದು ಹಿಂತಿರುಗುವಾಗ, 'ಅಲ್ಲಾ, ನೀವು ಈ ಮನೀಗ್ ಬಂದು ಬಾಳ ದಿನ ಆತು. ನಿಮ್ಮಗ ಬಂದಂಗೇ ಕಾಣ್ತಿಲ್ಲಾ' ಎಂದು ರಾಗ ಎಳೆದಿದ್ದ.

'ಏನಿಲ್ಲ, ನಾಳೆ ಬರ್ಬೋದು ಹೇಳ್ತೀನಿ'. ಹೌದು ಎನ್ನಿಸಿತು ಸರಸೂಗೆ. ಈ ಮೂರು ವರ್ಷದಲ್ಲಿ ಅವನು ಬಂದದ್ದು ಹೋದದ್ದು ಯಾರಿಗೂ ಗೊತ್ತೇ ಆಗದ ಹಾಗೆ ಅಷ್ಟು ಅವಸರದಲ್ಲಿ ಜರುಗಿಹೋಗಿತ್ತು.

'ಅಷ್ಟು ಮಾಡಿ... ನಿಮ್ಮನೆ ಸೇರೋ ಹಾಗಾದ್ರೆ... ಅದ್ಕಿಂತ ಒಳ್ಳೇದಿನ್ನೇನು... ಬಂಗಾರದಂಗಾಗ್ತದೆ' ಎಂದದ್ದು ನೆನಪಾಗಿ ಮತ್ತೆ ಆಸೆ ನಿರೀಕ್ಷೆಗಳ ದಿಕ್ಕಿಗೆ ಮುಖ ಮಾಡಿದಳು.

ಕರೆಂಟು ಹೋದ ಸ್ವಲ್ಪ ಹೊತ್ತಿನಲ್ಲಿ ನಾಗೇಂದ್ರ ಬಂದ. ಕಾಲೇಜಿನವರೇ ಊಟಕ್ಕೆ ಏರ್ಪಾಡು ಮಾಡಿದ್ದರೆಂದು ಹೇಳಿ ಅರೆಬೆಳಕಲ್ಲಿ ರೂಮಿಗೆ ಹೋಗುತ್ತ ಗೋಡೆಗೆ ಒರಗಿಸಿಟ್ಟ ಸೂಟ್‌ಕೇಸ್ ಎಡವಿದ. ಅದರ ಬಾಯಿ ಬಿಚ್ಚಿಕೊಂಡಿತು.

ಊಟ ಮಾಡಿ ಉಳಿದ ಕೆಲಸ ಮುಗಿಸಿ ಕೆಲವು ಸಮಯ ಕುಳಿತು ಅಂದಿನ ಪೇಪರಿನ ಮೇಲೆ ಕಣ್ಣಾಡಿಸಿ ಮಲಗುವ ಮುಂಚೆ ನೋಡಿದಾಗ ಎಂದಿನಂತೆ ಪ್ರಿಯಾಳ ರೂಮಿನಲ್ಲಿ ಬೆಳಕು ಕಂಡಿತು.

ನಡುರಾತ್ರಿಗಿಂತಲೂ ಹೆಚ್ಚು ಸಮಯವಾಗಿರಬೇಕು. ಸರಸೂಗೆ ಮುತ್ತಿದ ಆಲೋಚನೆಗಳಿಂದ ಬಿಡುಗಡೆ ಇರಲಿಲ್ಲ. ಅರೆನಿದ್ರೆಯಷ್ಟೇ. ಸುಮ್ಮನೆ ಹೊರಳಾಟ. ರಸ್ತೆಯಲ್ಲಿ ವಾಹನಗಳ ಸದ್ದಿಲ್ಲ. ಆಗೀಗ ನಾಯಿಗಳ ಬೊಗಳುವಿಕೆ. ನಿಶ್ಶಬ್ದದ ಭಾರದಿಂದ ಅವಳಿಗೆ ಆಗಾಗ ಭಯವಾಗುವುದುಂಟು. ಅದೂ ಅಭ್ಯಾಸವಾಗಿ ಈಗೀಗ ಅದನ್ನು ಅಲಕ್ಷಿಸುತ್ತಾಳೆ. ಸುತ್ತ ಹಬ್ಬಿದ ನಿಶ್ಶಬ್ದವನ್ನು ಸೀಳುವಂಥ ಕೆಲವು ಶಬ್ದಗಳು ವಿಶೇಷವೆನಿಸಲಿಲ್ಲ. ಆದರೆ ತಕ್ಷಣವೇ ಚೀತ್ಕಾರದ ಶಬ್ದ ತಡೆದು ತಡೆದು ಕೇಳಿಸಿತು. ಕೇಳಿಸಿದ ದನಿ ಪ್ರಿಯಾಳದ್ದಲ್ಲವೇ ಎಂದು ಅನುಮಾನಗೊಂಡು ಜಾಗೃತಳಾದಳು. ಅದು ಹೆಚ್ಚಾಗದೇ ಮುಂದುವರಿಯದೇ ಹೋದಾಗ ತನ್ನ ಭ್ರಮೆ ಇರಬೇಕು ಎನಿಸಿತವಳಿಗೆ. ಈಗ ಇನ್ನಷ್ಟು ಹೆಚ್ಚಿನ ಮಟ್ಟದ ಚೀತ್ಕಾರ ಕೇಳಿ ಅವಳ ಅನುಮಾನಕ್ಕೆ ಆಸ್ಪದವಿರಲಿಲ್ಲ. ಅದು ಪ್ರಿಯಾಳದೇ...

ದಿಗ್ಗನೆದ್ದಳು ಸರಸೂ. ಬಾಗಿಲು ತೆಗೆದು ಅರೆಬೆಳಕಲ್ಲಿ ಹೊರಟಾಗ ಪ್ರಿಯಾಳ ಕ್ಷೀಣ ಧ್ವನಿ ಹತ್ತಿರವಾಗಲು ತೊಡಗಿತು. ರಸ್ತೆಯಲ್ಲಿ ಯಾರಿಲ್ಲದಿದ್ದರೂ ತೊಡರಿದಳು. ಸರಿಪಡಿಸಿಕೊಂಡಾಗ ಕೈಗೆ ಕೋಲೊಂದು ಸಿಕ್ಕಿತು. ಅದನ್ನು ಹಿಡಿದುಕೊಂಡೇ ಹೋಗಿ ಅವಳ ರೂಮಿನ ಕಿಟಕಿಯೊಳಗೆ ಇಣುಕಿದಳು.

ಕಂಡ ದೃಶ್ಯದಿಂದ 'ಪ್ರಿಯಾ...' ಎಂದು ಅಬ್ಬರಿಸಿದಳು. ಅವಳ ಬಟ್ಟೆಗಳು ಹರಿದಿದ್ದವು. ಕೂಗದಂತೆ ಬಾಯಿಗೆ ಕೈಯಿಟ್ಟವನೊಬ್ಬ ಅತ್ಯಾಚಾರಕ್ಕೆ ಹವಣಿಸುತ್ತಿದ್ದ. ಅವಳ ಕೈಗಳು ಅತ್ತಿತ್ತ ಆಡುತ್ತಿದ್ದವು. ಹೆಣಗಾಡುತ್ತಿದ್ದಳು. ಸರಸೂ ಇನ್ನೊಂದು ಕ್ಷಣದಲ್ಲಿ ಅವಳ ರೂಮಿನ ಬಾಗಿಲ ಬಳಿ ಇದ್ದಳು. ಮತ್ತೆ 'ಪ್ರಿಯಾ' ಎಂದು ಕೂಗಿದಾಗ ಒಳಗಿದ್ದವನಿಗೆ ಬದಲಾದ ಪರಿಸ್ಥಿತಿ ತಟ್ಟಿರಬೇಕು. ಪ್ರಿಯಾಳನ್ನು ಅತ್ತ ದೂಡಿದ. ಅವನ ಮುಖ ಸರಸೂಗೆ ಕಾಣಲಿಲ್ಲ. ಅವಳ